**All India Radio: Bangalore**
**National Bulletin In Kannada**
**25.07.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು :

1. ಸಂಸತ್ತಿನ ಉಭಯ ಸದನಗಳಲ್ಲಿಂದು ವಿಪಕ್ಷಗಳ ಗದ್ದಲ ಮುಂದುವರಿಕೆ; ಲೋಕಸಭೆ ಹಾಗೂ ರಾಜ್ಯಸಭೆ ಕಲಾಪ ಮುಂದೂಡಿಕೆ
2. ಎರಡು ದಿನಗಳ ಭೇಟಿಗಾಗಿ ಮಾಲ್ಡೀವ್ಸ್ ತಲುಪಿದ ಪ್ರಧಾನಿ; 'ಸಮಗ್ರ ಆರ್ಥಿಕ-ಕಡಲ ಭದ್ರತಾ ಪಾಲುದಾರಿಕೆಯ ಪ್ರಗತಿ ಪರಿಶೀಲನೆ ನಿರೀಕ್ಷೆ
3. ಕಾನೂನು ಉಲ್ಲಂಘಿಸಿದ ೨೫ ಜಾಲತಾಣಗಳನ್ನು ನಿರ್ಬಂಧಿಸುವಂತೆ ಅಂತರ್ಜಾಲ ಸೇವಾ ಪೂರೈಕೆದಾರರಿಗೆ  ಕೇಂದ್ರ ಸರ್ಕಾರ ಆದೇಶ
4. ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿ ; ನಾಲ್ಕನೇ ಪಂದ್ಯದ ಮೂರನೇ ದಿನದಾಟದಲ್ಲಿಂದು ಇನ್ನಿಂಗ್ಸ್ ಮುಂದುವರೆಸಲಿರುವ ಇಂಗ್ಲೆಂಡ್

<><><><>

ಲೋಕಸಭೆಯಲ್ಲಿ ೨೬ನೇ ಕಾರ್ಗಿಲ್ ವಿಜಯ ದಿವಸದ ಮುನ್ನಾದಿನವಾದ ಇಂದು ದೇಶದ ವೀರಯೋಧರನ್ನು ಸ್ಮರಿಸಿ ಗೌರವ ನಮನ ಸಲ್ಲಿಸಲಾಯಿತು. ಇಂದು ಬೆಳಗ್ಗೆ ನಿಗದಿತ ೧೧ ಗಂಟೆಗೆ ಸದನ ಸಭೆ ಸೇರಿದಾಗ ಲೋಕಸಭಾಧ್ಯಕ್ಷ ಓಂ ಬಿರ್ಲಾ ರಾಷ್ಟ್ರ ರಕ್ಷಣೆಗೆ ತಮ್ಮ ಪ್ರಾಣವನ್ನೇ ತ್ಯಾಗಗೈದ ಭಾರತೀಯ ಸಶಸ್ತ್ರ ಪಡೆಗಳ ಹುತಾತ್ಮ ಯೋಧರ ಧೈರ್ಯ ಮತ್ತು ಸಾಹಸವನ್ನು ಸ್ಮರಿಸಿದರು. ತೀವ್ರ ಹವಾಮಾನ ಪರಿಸ್ಥಿತಿ ಮತ್ತು ಕಠಿಣ ಭೂ ಪ್ರದೇಶದಲ್ಲಿ ಎದುರಾಳಿ ಸೈನಿಕರನ್ನು ಎದುರಿಸಿ ವಿಜಯಶಾಲಿಯಾದ ವೀರಯೋಧರಿಗೆ ಸದನ ಗೌರವ ಸೂಚಿಸಿ, ಹುತಾತ್ಮ ಯೋಧರ ಗೌರವಾರ್ಥ ಮೌನ ಆಚರಿಸಿತು. ಬಳಿಕ ಸಭಾಧ್ಯಕ್ಷ ಓಂ ಬಿರ್ಲಾ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಂಡು ಸದನ ನಡೆಸಲು ಪ್ರಯತ್ನಿಸಿದಾದರೂ ಪ್ರತಿಪಕ್ಷ ಸದಸ್ಯರು ಸದನದ  ಬಾವಿಗಿಳಿದು ಬಿಹಾರದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಾಚರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಲು ಆಗ್ರಹಿಸಿ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು. ಈ ವೇಳೆ ಸಭಾಧ್ಯಕ್ಷರು ಸದನದ ಕಾರ್ಯಕಲಾಪವನ್ನು ಉದ್ದೇಶ ಪೂರ್ವಕವಾಗಿ ಅಡ್ಡಿ ಪಡಿಸಲಾಗುತ್ತಿರುವುದನ್ನು ಗಮನಿಸಲಾಗಿದೆ. ಈ ವರ್ತನೆ ಸದನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆ ತರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಆದರೂ ಪ್ರತಿಪಕ್ಷಗಳ ಗದ್ದಲ ಮುಂದುವರಿದ ಬೆನ್ನಲ್ಲೇ ಸದನವನ್ನು ಅಪರಾಹ್ನ ೨ ಗಂಟೆಗೆ ಮುಂದೂಡಲಾಗಿದೆ.

<><><><>

ರಾಜ್ಯಸಭೆಯಲ್ಲಿಂದು ವಿವಿಧ ವಿಷಯಗಳ ಮುಕ್ತ ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿದ ಬೆನ್ನಲ್ಲೇ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಗಿದೆ. ಮೊದಲ ಬಾರಿಗೆ ಮುಂದೂಡಲ್ಪಟ್ಟು, ೧೨ ಗಂಟೆಗೆ ಸದನ ಪುನಃ ಸಭೆ ಸೇರಿದಾಗ ಪೀಠಾಸೀನಾಧಿಕಾರಿ ಘನಶ್ಯಾಮ ತಿವಾರಿ ಪ್ರಶ್ನೋತ್ತರ ಕಲಾಪ ಕೈಗೊಳ್ಳಲು ಪ್ರಯತ್ನಿಸಿದರಾದರೂ ಪ್ರತಿಪಕ್ಷಗಳ ಗದ್ದಲ ಮುಂದುವರೆಯಿತು. ಇದರ ಬೆನ್ನಲ್ಲೇ ಸದನವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು. ಬೆಳಗ್ಗೆ ಕಲಾಪ ಆರಂಭವಾದಾಗ ರಾಜ್ಯಸಭೆಗೆ ನೂತನವಾಗಿ ಆಯ್ಕೆಯಾಗಿರುವ ಸದಸ್ಯರಾದ ಕಮಲ್‌ಹಾಸನ್, ರಜತಿ, ಎಸ್.ಆರ್. ಸಿವಲಂಗಂ ಮತ್ತು ಪಿ.ವಿಲ್ಸನ್ ಪ್ರಮಾಣ ವಚನ ಸ್ವೀಕರಿಸಿದರು.

<><><><>

ಯಶಸ್ವಿ ಬ್ರಿಟನ್ ಪ್ರವಾಸ ಸಂಪನ್ನಗೊಳಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಎರಡು ದಿನಗಳ ಮಾಲ್ಡೀವ್ಸ್ ಭೇಟಿಗಾಗಿ ಇಂದು ಮಾಲ್ಡೀವ್ಸ್ ರಾಜಧಾನಿ ಮಾಲೆಗೆ ತಲುಪಿದ್ದಾರೆ. ಇಂದು ಬೆಳಿಗ್ಗೆ ವೆಲನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಅವರನ್ನು ಮಾಲ್ಡೀವ್ಸ್ ಅಧ್ಯಕ್ಷ ಡಾ. ಮೊಹಮದ್

ಮುಯಿಝು ಬರಮಾಡಿಕೊಂಡರು. ಬಳಿಕ ಪ್ರಧಾನಿ ಅವರಿಗೆ ಭಾರತದ ಪಾರಂಪಾರಿಕ ನೃತ್ಯ ಪ್ರದರ್ಶನದ ಮೂಲಕ ಭವ್ಯ ಸ್ವಾಗತ ಕೋರಲಾಯಿತು. ೨೦೨೩ರ ನವೆಂಬರ್‌ನಲ್ಲಿ ಅಧ್ಯಕ್ಷ ಡಾ. ಮೊಹಮದ್ ಮುಯಿಝು ಅಧಿಕಾರಕ್ಕೆ ಬಂದ ನಂತರ ಪ್ರಧಾನಮಂತ್ರಿ ಮೋದಿಯವರ ಮೊದಲ ಹಾಗೂ ಒಟ್ಟಾರೆ ಮೂರನೇ ಭೇಟಿ ಇದಾಗಿದೆ. ತಮ್ಮ ಭೇಟಿಯ ಭಾಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಮಾಲ್ಡೀವ್ಸ್ ಅಧ್ಯಕ್ಷರೊಂದಿಗೆ 'ಸಮಗ್ರ ಆರ್ಥಿಕ ಹಾಗೂ ಕಡಲ ಭದ್ರತಾ ಪಾಲುದಾರಿಕೆಯ ಸಮಗ್ರ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ. ಪ್ರಧಾನಮಂತ್ರಿ ಅವರು ಇತರ ಮಾಲ್ಡೀವ್ಸ್ ನಾಯಕರನ್ನು ಭೇಟಿ ಮಾಡಿ, ದ್ವಿಪಕ್ಷೀಯ ವಿಷಯಗಳ ಕುರಿತಂತೆ ಚರ್ಚೆ ನಡೆಸಲಿದ್ದಾರೆ. ಈ ಭೇಟಿಯಲ್ಲಿ ಹಲವು ಒಪ್ಪಂದಗಳು ಹಾಗೂ ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಿಸಿದ ತಿಳಿವಳಿಕಾ ಒಪ್ಪಂದಗಳಿಗೆ ಸಹಿ ಹಾಕಲಾಗುವ ನಿರೀಕ್ಷೆಯಿದೆ. ಇದಲ್ಲದೇ ಹಲವು ಮೂಲಸೌಕರ್ಯ ಯೋಜನೆಗಳ ಉದ್ಘಾಟನೆ ಸಹ ನಡೆಯಲಿದೆ. ನಾಳೆ, ಪ್ರಧಾನಮಂತ್ರಿ ಅವರು ಮಾಲ್ಡೀವ್ಸ್‌ನ ೬೦ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಪ್ರಸಕ್ತ ವರ್ಷ, ಭಾರತ ಮತ್ತು ಮಾಲ್ಡೀವ್ಸ್ ನಡುವೆ ರಾಜತಾಂತ್ರಿಕ ಸಂಬಂಧ ಸ್ಥಾಪನೆಯ ೬೦ನೇ ವಾರ್ಷಿಕೋತ್ಸವೂ ಆಗಿದೆ. ಪ್ರಧಾನಮಂತ್ರಿಯವರ ಈ ಭೇಟಿಯಿಂದ ಭಾರತ ಮತ್ತು ಮಾಲ್ಡೀವ್ಸ್ ನಡುವಿನ ದ್ವಿಪಕ್ಷೀಯ ಸಹಕಾರಕ್ಕೆ ಇನ್ನಷ್ಟು ವೇಗ ಸಿಗಲಿದೆ ಎಂದು ನಿರೀಕ್ಷಿಸಲಾಗಿದೆ.

<><><>

ಕಳೆದ ವರ್ಷ ಮಾಲ್ಡೀವ್ಸ್ ಅಧ್ಯಕ್ಷ ಡಾ.ಮೊಹಮ್ಮದ್ ಮೂಯಿಜು ಅವರ ಭಾರತ ಭೇಟಿಯ ವೇಲೆ ಮಾಲ್ಡೀವ್ಸ್‌ನಲ್ಲಿ ರುಪೇ ಕಾರ್ಡನ್ ಅನ್ನು ಬಿಡುಗಡೆಗೊಳಿಸಲಾಗಿತ್ತು. ಆ ವೇಳೆ ಉಭಯ ರಾಷ್ಟ್ರಗಳ ನಡುವೆ ಯುಪಿಐ ಮೂಲಕ ಸಂಪರ್ಕ ಸಾಧಿಸಲು ಸಹಮತ ವ್ಯಕ್ತವಾಗಿತ್ತು. ಯುಪಿಐ ಅಳವಡಿಕೆ ಕುರಿತ ಪ್ರಗತಿಯ ಬಗ್ಗೆ ಮಾಹಿತಿ ನೀಡಿರುವ ಮಾಲ್ಡೀವ್ಸ್ ಗೆ ಭಾರತೀಯ ಹೈ ಕಮಿಷ್‌ನರ್ ಜಿ.ಬಾಲಸುಬ್ರಮಣಿಯನ್, ಯುಪಿಐ ಅಳವಡಿಕೆ ಕುರಿತು ಉಭಯ ರಾಷ್ಟ್ರಗಳು ಗಂಭೀರ ಚಿಂತನೆ ನಡೆಸಿದ್ದು, ಅದರ ಅನುಷ್ಠಾನದ ಸನಿಹದಲ್ಲಿದ್ದೇವೆ. ಉಭಯ ರಾಷ್ಟ್ರಗಳ ಒಪ್ಪಿಗೆಯ ಬಳಿಕ ಕೆಲವು ನಿಬಂಧನೆಗಳ ಅನುಸಾರ ಅನುಷ್ಠಾನ ಅವಧಿಯನ್ನು ತೀರ್ಮಾನಿಸಲಾಗುವುದು. ಅತೀ ಶೀಘ್ರದಲ್ಲೇ ಭಾರತ ಹಾಗೂ ಮಾಲ್ಡೀವ್ಸ್ ನಾಗರಿಕರು ಇದರ ಪ್ರಯೋಜನ ಪಡೆಯಲಿದ್ದಾರೆ ಎಂದು ತಿಳಿಸಿದ್ದಾರೆ.

<><><>

ಭಾರತದಲ್ಲಿ ಅಶ್ಲೀಲ ಮತ್ತು ಕಾನೂನು ಬಾಹೀರ ವಿಷಯಗಳಿಗೆ ಸಾರ್ವಜನಿಕ ಪ್ರವೇಶವನ್ನು ತಡೆಹಿಡಿಯುವ ಪ್ರಯತ್ನದ ಭಾಗವಾಗಿ ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಳ್ಳುತಿದ್ದು, ಡಿಜಿಟಲ್ ಜಗತ್ತಿನಲ್ಲಿ ನೀತಿ ಮತ್ತು ನೈತಿಕತೆಗೆ ಒತ್ತು ನೀಡುತ್ತಿದೆ. ಇದಕ್ಕೆ ಪೂರಕವಾಗಿ, ೨೫ ನಿರ್ದಿಷ್ಟ ಜಾಲತಾಣಗಳಿಗೆ ಭಾರತದಲ್ಲಿ ಸಾರ್ವಜನಿಕ ಪ್ರವೇಶವನ್ನು ನಿರ್ಬಂಧಿಸುವಂತೆ ಅಂತರ್ಜಾಲ ಸೇವಾ ಪೂರೈಕೆದಾರರಿಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಈ ಜಾಲತಾಣಗಳು ನಿಷೇಧಿತ ಪ್ರಸಾರದಲ್ಲಿ ತೊಡಗಿದ್ದವು ಮತ್ತು ಹಲವು ಕಾನೂನುಗಳನ್ನು ಉಲ್ಲಂಘಿಸಿದ್ದ ಆರೋಪದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಸಚಿವಾಲಯದ ಪ್ರಕಾರ ಈ ಜಾಲತಾಣಗಳು ಮಾಹಿತಿ ತಂತ್ರಜ್ಞಾನ ಕಾಯಿದೆಯ ಸೆಕ್ಷನ್ ೬೭ ಮತ್ತು ೬೭ಎ, ೨೦೨೩ರ ಭಾರತದ ನ್ಯಾಯ ಸಂಹಿತೆಯ ಸೆಕ್ಷನ್ ೨೯೪ ಹಾಗೂ ೧೯೮೬ರ ಮಹಿಳೆಯರ ಅನುಚಿತ ಪ್ರಾತಿನಿಧ್ಯ ನಿಷೇಧ ಕಾಯಿದೆಯ ಸೆಕ್ಷನ್ ನಾಲ್ಕನ್ನು ಉಲ್ಲಂಘಿಸಿವೆ.

<><><>

ಸೆಪ್ಟಂಬರ್ ನಲ್ಲಿ ನಡೆಯುವ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಪ್ಯಾಲೇಸ್ತಿನ್ ಅನ್ನು ಅಧಿಕೃತವಾಗಿ ಫ್ರಾನ್ಸ್ ಗುರುತಿಸಲಿದೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರಾನ್ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅವರು, ಮಧ್ಯಪ್ರಾಚ್ಯ ಪ್ರದೇಶದಲ್ಲಿ ಶಾಂತಿ ಸ್ಥಾಪನೆಗೆ ಫ್ರಾನ್ಸ್ ಭದ್ರತೆಗೆ ಅನುಸಾರವಾಘಿ ಪ್ಯಾಲೇಸ್ತಿನ್ ಅನ್ನು ರಾಷ್ಟ್ರವಾಘಿ ಗುರುತಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಗಾಜಾ ಪಟ್ಟಿಯಲ್ಲಿ ಯುದ್ಧ ಕೊನೆಗೊಂಡು ನಾಗರಿಕರನ್ನು ರಕ್ಷಿಸಿಸುವುದು ಅಗತ್ಯವಾಗಿದೆ ಎಂದು ಹೇಳಿದ್ದಾರೆ.

<><><>

ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್ ಮೈದಾನದಲ್ಲಿ ನಡೆಯುತ್ತಿರುವ ಅಂಡರ್ಸನ್-ತೆಂಡುಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್‌ನ ೪ನೇ ಪಂದ್ಯದ ೩ನೇ ದಿನವಾದ ಇಂದು ಇಂಗ್ಲೆಂಡ್ ಪರ ಕಣದಲ್ಲಿರುವ  ಓಲಿ ಪೋಪ್ ಮತ್ತು ಜೋ ರೂಟ್ ತಮ್ಮ ಇನಿಂಗ್ಸ್ ಮುಂದುವರೆಸಲಿದ್ದಾರೆ. ಇಂದಿನ ದಿನದಾಟ ಅಪರಾಹ್ನ ೩.೩೦ಕ್ಕೆ ಆರಂಭವಾಗಲಿದೆ. ೨ನೇ ದಿನದಾಟದ ಅಂತ್ಯಕ್ಕೆ ನಿನ್ನೆ ಭಾರತದ ವಿರುದ್ಧ ಇಂಗ್ಲೆಂಡ್ ತನ್ನ ಮೊದಲನೇ ಇನ್ನಿಂಗ್ಸ್‌ನಲ್ಲಿ ೨ ವಿಕೆಟ್ ನಷ್ಟಕ್ಕೆ ೨೨೫ ರನ್ ಗಳಿಸಿದೆ. ಭಾರತದ ಮೊದಲ ಇನಿಂಗ್ಸ್, ೩೫೮ ರನ್‌ಗಳಿಗೆ ಕೊನೆಗೊಂಡಿದ್ದು, ಇಂಗ್ಲೆಂಡ್ ಇನ್ನೂ ೧೩೩ ರನ್‌ಗಳ ಹಿನ್ನಡೆಯಲ್ಲಿದೆ. ಈ ಮೂರನೇ ದಿನದಾಟ ಉಭಯ ತಂಡಗಳಿಗೆ ನಿರ್ಣಾಯಕವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>